ನಾಂದಿಪದ

# ಹತ್ತಾರು ತೊರೆಗಳು

ಭಿನ್ನ ಕ್ಷೇತ್ರಗಳಲ್ಲಿ ತೊಡಗಿಕೊಂಡಿರುವ ವೃತ್ತಿವಂತರ ಚಿಂತನೆಗಳು, ವಿಚಾರಗಳು ತಕ್ಷಣಕ್ಕೆ ಗಮನಕ್ಕೆ ಸೆಳೆಯುವಂತಿರುತ್ತವೆ. ಅವು ಅಪರೂಪದ ಹೊಳಹು ಮತ್ತು ಕಾಂತಿಯಿಂದ ಕೂಡಿರುತ್ತವೆ. ತೀರ 'ಸಾಹಿತ್ಯಕ' ಚಿಂತನೆಗಳು ಓದುಗರಿಗೆ ಬೇಸರ ಹುಟ್ಟಿಸುವುದರ ಜೊತೆಗೆ ಆಕಳಿಕೆ ತರುವ ಸಾಧ್ಯತೆ ಇರುತ್ತದೆ. ಸಾಹಿತಿಗಳ ಹೊರತಾಗಿ ಬೇರೆ ಬೇರೆ ರಂಗಗಳಲ್ಲಿ ಕೆಲಸಮಾಡುವರು ಸಂಸ್ಕೃತಿಯ ಕೌದಿಗೆ ಸೇರಿಸುವ ವಿಚಾರಗಳ ಚೂರುಗಳು ನಮ್ಮನ್ನು ಅನುಗಾಲವೂ ಪೊರೆಯಬಲ್ಲವು; ಹೊಸ ದಾರಿ, ದಿಕ್ಕುಗಳನ್ನು ತೆರೆಯಬಲ್ಲವು. ಹಲವು ತೊರೆಗಳು ಬಂದು ಸೇರಿದಾಗಲೇ ನುಡಿಯ ನದಿಗೆ ಚೆಲುವು, ಚಲನೆ, ಆಳ, ವಿಸ್ತಾರ, ಚುರುಕುತನ ಬರುತ್ತದೆ. ಪ್ರತಿ 'ಮಯೂರ'ವೂ ಹೊರಜಗತ್ತಿಗೆ ಸಂಪರ್ಕ ಕಲ್ಪಿಸುವ ಇಂತಹ ಹತ್ತಾರು ಬೆಳಕಿಂಡಿಗಳನ್ನು ತನ್ನಲ್ಲಿ ಇಟ್ಟುಕೊಂಡಿರುತ್ತದೆ. ಕತೆ, ಪ್ರಬಂಧಗಳ ಜೊತೆಗೆ ಸಂಗೀತ, ರಂಗಭೂಮಿ, ಸಿನಿಮಾ, ಕಲೆಯ ಕುರಿತ ಬರಹಗಳು ಪತ್ರಿಕೆಯಲ್ಲಿ ಆಗಾಗ ಪ್ರಕಟವಾಗುವುದನ್ನು ಓದುಗರು ಗಮನಿಸಿರಬಹುದು. ಇಂತಹ ವಿಷಯ ಮಿಶ್ರಣ, ವೈವಿಧ್ಯಗಳೇ ಪತ್ರಿಕೆಯೊಂದಕ್ಕೆ ಜೀವ ತರುವ ಅಂಶಗಳು.

ಈ ಬಾರಿ ಸಿನಿಕಸುಬುದಾರ, ಕನ್ನಡಕ್ಕೆ ಅನನ್ಯ ಸಿನಿಮಾಗಳನ್ನು ಕೊಟ್ಟ ಪ್ರತಿಭಾಶಾಲಿ ನಿರ್ದೇಶಕ ಸೂರಿ ಅವರ ಸಂದರ್ಶನವನ್ನು ಕೊಡಲಾಗಿದೆ. ಅವರ ಇಲ್ಲಿನ ಮಾತುಗಳು ಅವರ ಸಿನಿಮಾಗಳಂತೆಯೇ ವಾಸ್ತವವನ್ನು ಹಸಿಯಾಗಿ ಹಿಡಿಯುತ್ತವೆ. ಚಿತ್ರಕಲಾವಿದರೂ ಆಗಿರುವ ಸೂರಿ ಬಿಡಿಸಿಟ್ಟಿರುವ ನೇರ, ಪ್ರಖರ ಮಾತುಗಳು ಓದುಗರನ್ನು ಚಕಿತಗೊಳಿಸಬಹುದು.

ಕನ್ನಡದ ಇಬ್ಬರು ಹಿರಿಯ ಕವಿಗಳು ಬರವಣಿಗೆ ನಿಲ್ಲಿಸಿ ನಿರ್ಗಮಿಸಿದ್ದಾರೆ. ನವ್ಯಕಾವ್ಯದ ಕೊನೆಯ ಕೊಂಡಿ ಸುಮತೀಂದ್ರ ನಾಡಿಗ, ಗೀತರಚನಕಾರರಾಗಿ ಪ್ರಸಿದ್ಧರಾಗಿದ್ದ ಎಂ.ಎನ್. ವ್ಯಾಸರಾವ್ ಕನ್ನಡದ ಮುಖ್ಯ ಲೇಖಕರಾಗಿದ್ದವರು. ಅವರ ಕುರಿತ ಬರಹಗಳು ಈ ಸಂಚಿಕೆಯಲ್ಲಿವೆ. ಈ ಇಬ್ಬರು ಕವಿಗಳಿಗೆ 'ಮಯೂರ'ದ ನಮನಗಳು.

**ಸಂದೀಪ ನಾಯಕ**